

# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ನವಂಬರ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 11 ಪ್ರಕಟಣೆ : 24-11-2025


## ಸಾಲದ ಹೊಣೆ ಮುಗಿಸಿ ಸಮಾಜಮುಖೀ ಸಾಧನೆಯ ಹೆಜ್ಜೆಯಲ್ಲಿ 'ಶಿವಸದನ'




ಶ್ರೀ ಸುಬ್ರಹ್ಮಣ್ಯ ಸಭಾದ ಅಂಗಸಂಸ್ಥೆ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ, ಮುರ ಈ ಯೋಜನೆಗೆ ಮೊತ್ತಮೊದಲು ನಾವು ಹೆಜ್ಜೆ ಇಡುವಾಗಲೇ ಕಾಂತಾವರ ಶ್ರೀ ಪ್ರಭಾಕರ್ ರಾವ್ ಅವರ ಸಂಪೂರ್ಣ ಸಹಕಾರದಿಂದ ಮುಂದುವರಿದಿರುತ್ತದೆ. ಶ್ರೀಯುತರು ರೂ. 5,00,000/- ದೇಣಿಗೆ ನೀಡಿ, ಎಲ್ಲರಿಗೂ ಮಾದರಿ ಕಾರ್ಯಾರಂಭಿಸಿ ಶುಭಕೋರಿದರು. ಅವರು ದೇಣಿಗೆ ನೀಡಿದ್ದು ಮಾತ್ರವಲ್ಲದೆ, ಅವರ ಕುಟುಂಬದವರು, ಬಂಧುಗಳಿಗೂ ದೇಣಿಗೆ ನೀಡುವಂತೆ ಪ್ರೇರೇಪಿಸಿದ್ದರು. ಅಷ್ಟರಲ್ಲೇ, ಆ ಪರಮಾತ್ಮನು ಈ ದಿವ್ಯಾತ್ಮವನ್ನು ತನ್ನಲ್ಲಿ ಐಕ್ಯಗೊಳಿಸಿಕೊಂಡ.

ಶಿವಸದನದ ಸಾಲದ ಉಳಿಕೆ ಮೊತ್ತವನ್ನು ನೀಡಿ ಋಣಮುಕ್ತಗೊಳಿಸುವ ಅವರ ಆಶಯವನ್ನು ಅವರ ಪತ್ನಿ ಶ್ರೀಮತಿ ಪ್ರಭಾ ಪಿ. ರಾವ್, ಪುತ್ರ ಶ್ರೀ ಶರತ್, ಮಗಳು ಶ್ರೀಮತಿ ಶ್ರುತಿ ಇವರು ಒಟ್ಟಾಗಿ ರೂ. 5,00,000/-ವನ್ನು ಶ್ರೀಯುತರ ಇಚ್ಛೆಯಂತೆ ನೀಡಿ ಸದನವನ್ನು ಋಣಮುಕ್ತಗೊಳಿಸಿದರು ಎಂದು ತಿಳಿಸಲು ನಾವು ತುಂಬಾ ಸಂತೋಷಪಡುತ್ತಿದ್ದೇವೆ. ದಿ| ಪ್ರಭಾಕರ ರಾಯರ ದಾನಶೀಲತೆ, ಸೌಮ್ಯಸ್ವಭಾವ, ಮಾನವೀಯತೆ ಎಲ್ಲರಿಗೂ ಸ್ಫೂರ್ತಿಯಾಗಲಿ ಎಂದು ಆಶಿಸುತ್ತೇವೆ.

ಈ ದಿಸೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಶಿವಸದನ ಟ್ರಸ್ಟ್‌ನ ಗೌರವಾಧ್ಯಕ್ಷರು, ಅಧ್ಯಕ್ಷರು, ಕಾರ್ಯದರ್ಶಿಯವರು, ಕೋಶಾಧಿಕಾರಿಯವರು ಹಾಗೂ ಟ್ರಸ್ಟ್‌ನ ಎಲ್ಲಾ ಸದಸ್ಯರು ಮುಖ್ಯವಾಗಿ ಶಿವಸದನದ ರೂವಾರಿಯಾದ ಶ್ರೀ ಕರುಣ್ ರಾವ್ ಬೆಳ್ಳೆಯವರ ಕೊಡುಗೆ ಅಪಾರ. ಅದು ನಿರಂತರ. ಸಾಲದಿಂದ ಋಣಮುಕ್ತವಾದ ಈ ಸಂತಸದ ಕ್ಷಣವನ್ನು ಎಲ್ಲರೂ ಸಂಭ್ರಮಿಸುತ್ತಿದ್ದೇವೆ. ಶಿವಸದನದ ನಿರ್ಮಾಣ ಹಾಗೂ ಈ ಸಾಧನೆಗೆ ಕಾರಣರಾದ, ದೇಣಿಗೆ ನೀಡಿದ ಪ್ರತಿಯೋರ್ವ ದಾನಿಗಳಿಗೂ ನಮ್ಮ ಮನದಾಳದ ಕೃತಜ್ಞತೆಗಳು.

ಶ್ರೀಮತಿ ಸುಮಂಗಲಾ ಪ್ರಭಾಕರ್, ಅಧ್ಯಕ್ಷರು, ಶಿವಸದನ ಚಾರಿಟೇಬಲ್ ಟ್ರಸ್ಟ್, ಪುತ್ತೂರು



ಬೆಂಗಳೂರು ನಿವಾಸಿ ಶ್ರೀ ಹರಿಪ್ರಸಾದ್ ಶಾನುಭೋಗ್ ಆಲಂಪಾಡಿ ಮತ್ತು ನ್ಯೂಜೆರ್ಸಿ USAಯ ನಿವಾಸಿ ಶ್ರೀ ಕೃಷ್ಣಪ್ರಸಾದ್ ಶಾನುಭೋಗ್ ಆಲಂಪಾಡಿ ಅವರು ತಮ್ಮ ತೀರ್ಥರೂಪರಾದ ಶ್ರೀ ನಾರಾಯಣ ಶಾನುಭೋಗ್ ಆಲಂಪಾಡಿ ಇವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ 1,00,001 (ರೂಪಾಯಿ ಒಂದು ಲಕ್ಷದ ಒಂದು) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹೃದಯಪೂರ್ವಕ ವಂದನೆಗಳು.



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಕುದ್ಮಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

### ಶ್ರೀ ಸಭಾದ ವಾರ್ಷಿಕೋತ್ಸವವು

ತಾರೀಕು 07-12-2025ನೇ ಆದಿತ್ಯವಾರದಂದು
ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**ಹೆಚ್ಚಿನ ಮಾಹಿತಿಗಾಗಿ**

ಶ್ರೀಮತಿ ಜಯಂತಿ ವಿನೋದ್ ರಾವ್ ✆ : 9945742680
ಶ್ರೀಮತಿ ಶಕುಂತಲಾ ವಿಜಯಕುಮಾರ್ ✆ : 9481973207
ಶ್ರೀ ಜನಕರಾಜ್ ✆ : 8494939446
ಶ್ರೀ ರಾಕೇಶ್ ಕುಡುಪು ✆ : 9741041458

### ಕಾರ್ಯಕ್ರಮಗಳು

ಬೆಳಗ್ಗೆ 7-00ರಿಂದ : ವಿವಿಧ ಪಾರಾಯಣಗಳು
ಬೆಳಗ್ಗೆ 8-00ರಿಂದ : ಉಪಾಹಾರ
ಪೂರ್ವಾಹ್ನ 8-30ರಿಂದ 9-30 : ಶ್ರೀ ಶಾರದಾಂಬಾ ಭಜನಾ ಮಂಡಳಿ ಇವರಿಂದ – **ಭಜನೆ**
ಪೂರ್ವಾಹ್ನ 9-30ರಿಂದ : **ಶ್ರೀ ಸತ್ಯನಾರಾಯಣ ಪೂಜೆ ಆರಂಭ**
ಪೂರ್ವಾಹ್ನ 10-00ರಿಂದ 11-00 : ಹೂಜೋಡಣಾ ಸ್ಪರ್ಧೆ (ಮುಕ್ತ ವಿಭಾಗ)
ಹತ್ತಿಯ ಬತ್ತಿ ತಯಾರಿಕಾ ಸ್ಪರ್ಧೆ
ಸಮಯ : 10 ನಿಮಿಷಗಳು (ಮುಕ್ತ ವಿಭಾಗ)
ರಂಗೋಲಿ ಸ್ಪರ್ಧೆ ❖ 20 ವರ್ಷದ ಒಳಗಿನ ಮಕ್ಕಳ ವಿಭಾಗ
❖ 21 ವರ್ಷದಿಂದ ಮೇಲಿನ ವಿಭಾಗ
ಪೂರ್ವಾಹ್ನ 10-30ರಿಂದ 11-00 : ಭಾಷಣ : ಪ್ರೊ. (ಡಾ.) ಕೃಷ್ಣರಾಜ ಉಪಾಧ್ಯಾಯ
ರೋಗಶಾಸ್ತ್ರಜ್ಞರು, ನಂದಿಕೂರು ಕ್ಲಿನಿಕಲ್ ಲಾಬೋರೇಟರಿ, ಮಂಗಳೂರು – ಇವರಿಂದ
ವಿಷಯ : ಮಧ್ಯವಯಸ್ಕ ಹಾಗೂ ಹಿರಿಯ ನಾಗರಿಕರಿಗೆ ಆವಶ್ಯವಿರುವ ವೈದ್ಯಕೀಯ ಪ್ರಯೋಗಾಲಯದ ಪರೀಕ್ಷೆಗಳು ಮತ್ತು ಕಾರಣಗಳು
ಪೂರ್ವಾಹ್ನ 11-00ರಿಂದ : **ಮಹಾಸಭೆ**
ಮಧ್ಯಾಹ್ನ 12-30ರಿಂದ : ಮಂಗಳಾರತಿ, ಪ್ರಸಾದ ವಿತರಣೆ, ಭೋಜನ
ಅಪರಾಹ್ನ 2-00ರಿಂದ : ಪ್ರಾರ್ಥನೆ
**ಸನ್ಮಾನ ಕಾರ್ಯಕ್ರಮ**
- ಶ್ರೀ ಹರೀಶ್ ಕುಮಾರ್ ವಿ.
  ಡೈರೆಕ್ಟರ್ (ಟೆಕ್ನಿಕಲ್), ಮೆಸ್ಕಾಂ, ಮಂಗಳೂರು
- ವಿದ್ವಾನ್ ಹೆಚ್. ರವಿ ಕುಮಾರ್, ಕುಂಜೂರು

ಬಹುಮಾನ ವಿತರಣೆ
ಅಪರಾಹ್ನ 2-30ರಿಂದ : **ಸಾಂಸ್ಕೃತಿಕ ಕಾರ್ಯಕ್ರಮಗಳು** : ಕಿರುನಾಟಕ ನೃತ್ಯ ಮತ್ತು 'ಸಮುದ್ರ ಮಥನ' ಹರಿಕಥಾ ಸಂಕೀರ್ತನ ಡಾ. ಬಿ. ವೈಷ್ಣವಿ ರಾವ್ ಬಜ್ಪೆ – ಇವರಿಂದ
ತಬಲದಲ್ಲಿ ಸಹಕಾರ : ಬಿ. ವೈಭವಿ ರಾವ್, ಬಜ್ಪೆ
ಧನ್ಯವಾದ, ರಾಷ್ಟ್ರಗೀತೆ

ಬಹುಮಾನದ ಪ್ರಾಯೋಜಕರು : ಶ್ರೀಮತಿ ಸ್ನೇಹಲತಾ ದಿವಾಕರ್ ರಾವ್

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.

• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 : 9343361618 e-mail : jnanashakthisss@gmail.com


## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 60ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598

## ಪಡುಬಿದ್ರೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 19ನೇ ಶಾಖೆ ಉದ್ಘಾಟನೆ



ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 19ನೇ ಶಾಖೆ ಪಡುಬಿದ್ರೆ ಜಂಕ್ಷನ್‌ನಲ್ಲಿ ನವೆಂಬರ್ 19ರಂದು ಉದ್ಘಾಟನೆಗೊಂಡಿತು. ಸಂಘದ ಅಧ್ಯಕ್ಷ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕರುಗಳಾದ ಶ್ರೀ ಉದಯ ಕುಮಾರ್, ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ಹರಿಶ್ಚಂದ್ರ ರಾವ್, ಶ್ರೀ ರಾಘವೇಂದ್ರ ರಾವ್, ಶ್ರೀ ವಾಸುದೇವ ರಾವ್, ಕಾರ್ಯನಿರ್ವಹಣಾಧಿಕಾರಿ ಶ್ರೀ ಸಾಯಿಪ್ರಸಾದ್, ಶಾಖಾ ವ್ಯವಸ್ಥಾಪಕ ಶ್ರೀ ಪ್ರೇಮ್ ಕುಮಾರ್, ಪಡುಬಿದ್ರೆಯ ಹಿರಿಯರು, ಸಮಾಜ ಬಾಂಧವರು, ಹಿತ–ಚಿಂತಕರುಗಳು ಹಾಜರಿದ್ದರು. ಪಾವಂಜೆ ಶ್ರೀ ಜಗದೀಶ್ ಉಪಾಧ್ಯಾಯರು ಪೂಜಾ ಕೈಂಕರ್ಯವನ್ನು ನಡೆಸಿದರು.

***ವರದಿ : ರಾಯಿ ರಾಜಕುಮಾರ***

## ಅಪಾರಕೀರ್ತಿ ಗಳಿಸಿ



**ಕು। ಸುಪರ್ಣಾ ರಾವ್** ಈ ಬಾರಿಯ ಸಿಎ ಅಂತಿಮ ಪರೀಕ್ಷೆಯನ್ನು ತೇರ್ಗಡೆಯಾಗಿದ್ದಾಳೆ. ಇವಳು ಕಟೀಲು ಶ್ರೀ ಲಕ್ಷ್ಮೀನಾರಾಯಣ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ಇವರ ಸುಪುತ್ರಿ.

## ಈಜು ಸ್ಪರ್ಧೆಯಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕ ಗೆದ್ದ ನಮ್ಮ ಸಮಾಜದ ಪುಟ್ಟ ಸಾಧಕ



ದಿನಾಂಕ 12 ಅಕ್ಟೋಬರ್ 2025ರಂದು ಮಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಈಜು ಸ್ಪರ್ಧೆಯಲ್ಲಿ ಏಳು ವರ್ಷದ ಮಾ। ವಿವಾಂಶ್ ರಾವ್ 25 ಮೀಟರ್ ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಚಿನ್ನದ ಪದಕ ಹಾಗೂ 25 ಮೀಟರ್ ಫ್ರೀ ಸ್ಟೈಲ್ ವಿಭಾಗದಲ್ಲಿ ಬೆಳ್ಳಿ ಪದಕ ಗಳಿಸಿರುತ್ತಾನೆ. ಮಾ। ವಿವಾಂಶ್ ರಾವ್ ತಮ್ಮ ತಂದೆ ಶ್ರೀ ಅನೂಪ್ ರಾವ್, ಎಲ್ಲೂರು ಇವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದು ಈ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾನೆ.

ಮಾ। ವಿವಾಂಶ್ ರಾವ್ ಉತ್ತಮ ಸ್ಕೇಟಿಂಗ್ ಹಾಗೂ ಬ್ಯಾಡ್ಮಿಂಟನ್ ಆಟಗಾರನಾಗಿದ್ದು ಎರಡೂ ಕ್ಷೇತ್ರದಲ್ಲಿ ತರಬೇತಿ ಪಡೆಯುತ್ತಿದ್ದಾನೆ. ಈಗಾಗಲೇ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗೆದ್ದಿದ್ದಾನೆ.

ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು (ಹೆಚ್.ಎಸ್.ಆರ್. ಲೇಔಟ್) ಇಲ್ಲಿ ಎರಡನೇ ತರಗತಿಯ ವಿದ್ಯಾರ್ಥಿಯಾಗಿರುವ ವಿವಾಂಶ್ ರಾವ್, ಶ್ರೀ ಅನೂಪ್ ರಾವ್ ಎಲ್ಲೂರು ಹಾಗೂ ಶ್ರೀಮತಿ ಹರ್ಷಿತಾ ರಾವ್ ದಂಪತಿಗಳ ಪುತ್ರ. ಎಲ್ಲೂರು ಶ್ರೀ ಮುರಳಿಕೃಷ್ಣ ರಾವ್ ಹಾಗೂ ಶ್ರೀಮತಿ ಜಯಲಕ್ಷ್ಮೀ ರಾವ್ ದಂಪತಿಗಳ ಹಾಗೂ ವಾಮಂಜೂರಿನ ಶ್ರೀ ಪ್ರಶಾಂತ್ ರಾವ್ ಮತ್ತು ಶ್ರೀಮತಿ ಹರಿಣಾಕ್ಷಿ ದಂಪತಿಗಳ ಮೊಮ್ಮಗ. ಮಾ। ವಿವಾಂಶ್ ರಾವ್ ಸಾಧನೆಗೆ 'ಜ್ಞಾನಶಕ್ತಿ ಬಳಗ' ಅಭಿನಂದಿಸುತ್ತದೆ ಹಾಗೂ ಉಜ್ವಲ ಭವಿಷ್ಯವನ್ನು ಕರುಣಿಸಲಿ ಎಂದು ಹಾರೈಸುತ್ತದೆ.





Prop. : SUDHAKAR BELLE
: 9845193103/ 9481563103
KARAN DIGITAL STUDIO
Sadasukh Building, Nr. Postoffice, Padubidri - 574 111
Opp. Busstand, Belman
All Marriage & Other functions
Photography & Videography Available

NAVADURGA FINANCIALS
Estd 1998
SCAN ME TO KNOW MORE!!!

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ–
Dr. Jayalakshmi Devi
Dr. Jaganmohan, Smt. Asha Mohan
Akarsh M. Rao
Konchadi, Mangalore - 575 008

ಪತ್ರಿಕೆಗೆ ಶುಭ ಬಯಸುವ –
ಕೆ. ಆರ್. ಉಪಾಧ್ಯಾಯ
ಮಂಗಳೂರು

## ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್

# ವಾರ್ಷಿಕೋತ್ಸವ ಮತ್ತು ಮಹಾಸಭೆ



ನಮ್ಮ ಸಂಘದ ಮಹಾಸಭೆ ಹಾಗೂ ವಾರ್ಷಿಕೋತ್ಸವವು ದಿನಾಂಕ 5–10–2025ನೇ ರವಿವಾರ ಸುರತ್ಕಲ್ ಸಮೀಪದ ಹೊಸಬೆಟ್ಟಿನ 'ನವಗಿರಿ ಕಲ್ಯಾಣ ಮಂಟಪ'ದಲ್ಲಿ ನಡೆಯಿತು. ಬೆಳಗ್ಗೆ ಗಂಟೆ 9:30ಕ್ಕೆ ಮಹಾಸಭೆ ಆರಂಭಗೊಂಡಿತು.

ಸಂಘದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್ ಅವರ ಅಧ್ಯಕ್ಷತೆಯೊಂದಿಗೆ ನಡೆದ ಈ ಮಹಾಸಭೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನ್‌ಭಾಗ್, ಉಪಾಧ್ಯಕ್ಷೆ ಶ್ರೀಮತಿ ಪರಿಮಳ ಪ್ರಶಾಂತ್, ಕಾರ್ಯದರ್ಶಿ ಶ್ರೀ ಫಾಲಚಂದ್ರ ಶರ್ಮ, ಕೋಶಾಧಿಕಾರಿ ಶ್ರೀ ರಾಧಾಕೃಷ್ಣ ಹೆಬ್ಬಾರ್, ಯುವ ವೇದಿಕೆ ಅಧ್ಯಕ್ಷ ಶ್ರೀ ಸಂದೀಪ್ ಹಾಗೂ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಸುನಿತಾ ಶ್ರೀಕಾಂತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಶ್ರೀಮತಿ ಪರಿಮಳ ಪ್ರಶಾಂತ್ ಅವರು ನಡೆಸಿದರು. ಸಭೆಗೆ ಹಾಜರಾದ ಸದಸ್ಯರಿಗೆ ಸಂಘದ ಅಧ್ಯಕ್ಷರು ಸ್ವಾಗತಿಸಿದರು. ಕಳೆದ ಒಂದು ವರ್ಷದ ಅವಧಿಯಲ್ಲಿ ಅಗಲಿದ ಸಂಘದ ಹಿರಿಯ ಸದಸ್ಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಸಂಘದ ಕಾರ್ಯದರ್ಶಿಯವರು 2024–25ನೇ ಸಾಲಿನ ಮಹಾಸಭೆಯ ನೋಟೀಸನ್ನು ಮತ್ತು ವರದಿಯನ್ನು ಮಂಡಿಸಿದರು. ಸಂಘದ ಕೋಶಾಧಿಕಾರಿ ಆಯ–ವ್ಯಯ ಮತ್ತು ಆಸ್ತಿ ಜವಾಬ್ದಾರಿ ತಖ್ತೆಗಳ ಪರಿಶೋಧಿತ ವರದಿಯ ಮಂಡಿಸಿದರು. 2025–26ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆದರು.

2025–26ನೇ ಸಾಲಿನ ಲೆಕ್ಕಪರಿಶೋಧಕರನ್ನಾಗಿ ಭಟ್ & ಶರ್ಮ ಇವರ ಪಾಲುದಾರರಾದ ಶ್ರೀ ಕೆ. ನಾಗರಾಜ್ ಶರ್ಮ ಅವರನ್ನು ಪುನಃ ಆಯ್ಕೆ ಮಾಡಲಾಯಿತು. ಖ್ಯಾತ ವೈದ್ಯರಾದ ಡಾ. ವೈ. ಸುದರ್ಶನ ರಾವ್ ಅವರ ಮಾರ್ಗದರ್ಶನದಲ್ಲಿ 2025–27ನೇ ಸಾಲಿನ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಕೊನೆಗೆ ಕಾರ್ಯದರ್ಶಿ ಶ್ರೀ ಫಾಲಚಂದ್ರ ಶರ್ಮ ಅವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಅನಂತರ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಕು। ಸಂಜನಾ ಇವರು ಪ್ರಾರ್ಥನೆ ಮಾಡಿದರು. ಶ್ರೀಮತಿ ಪರಿಮಳ ಪ್ರಶಾಂತ್ ಇವರು ಎಲ್ಲರನ್ನು ಸ್ವಾಗತಿಸಿದರು.

ಕೃಷಿಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ ಶ್ರೀ ಚಂದ್ರಕಾಂತ ರಾವ್ ಅವರನ್ನು ಸನ್ಮಾನಿಸಲಾಯಿತು. ಇವರ ಸಾಧನೆ ಗುರುತಿಸಿ ಸನ್ಮಾನ ನೀಡುವ ಸಂದರ್ಭದಲ್ಲಿ ಶ್ರೀ ಗೋಪಾಲಕೃಷ್ಣ ರಾವ್ ಅವರು ಸನ್ಮಾನ ಪತ್ರವನ್ನು ವಾಚಿಸಿದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಇದ್ದ ಸಂಘದ ಪದಾಧಿಕಾರಿಗಳು, ಪಡುಬಿದ್ರೆ ಸಂಘದ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತ ರಾವ್ ಇನ್ನ, ಕಾರ್ಕಳ ಸಂಘದ ಅಧ್ಯಕ್ಷರಾದ ಶ್ರೀ ಪದ್ಮನಾಭ ಬಂಡಿ, ನವಗಿರಿ ಸೇವಾ ಟ್ರಸ್ಟ್‌ನ ಟ್ರಸ್ಟಿಗಳಾದ ಶ್ರೀ ಜಯಚಂದ್ರ ಹತ್ವಾರ್, ಖ್ಯಾತ ವೈದ್ಯ ಡಾ. ವೈ. ಸುದರ್ಶನ ರಾವ್, ವಿಶ್ವಸ್ಥಾನಿಕ ಮಹಾಮಂಡಲದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

'ಕೃಷಿ ಪಂಡಿತ' ಪ್ರಶಸ್ತಿ ಪುರಸ್ಕೃತರಾದ ಶ್ರೀ ಇನ್ನ ಚಂದ್ರಕಾಂತ ರಾವ್ ಮಾತನಾಡಿ, ವಿದ್ಯೆಯ ಮಹತ್ವ ಮತ್ತು ಕೃಷಿಕ್ಷೇತ್ರದ ಮಹತ್ವವನ್ನು ವಿವರಿಸಿ, ನಮ್ಮ ಸಮಾಜದ ಮಕ್ಕಳು ಪ್ರತಿಯೊಂದು ಕ್ಷೇತ್ರದಲ್ಲಿ ಶ್ರಮಿಸಿ, ಸಾಧನೆ ಮಾಡಲು ಪ್ರೇರಣೆ ನೀಡಿದರು. ಮುಖ್ಯ ಅತಿಥಿಗಳಾದ ಡಾ. ವೈ. ಸುದರ್ಶನ ರಾವ್ ವಿದ್ಯಾರ್ಥಿಗಳಿಗೆ ವಿದ್ಯೆಯೊಂದಿಗೆ ಸಂಸ್ಕೃತಿ, ಸಂಸ್ಕಾರ, ಆರೋಗ್ಯದಕಡೆ ಗಮನಹರಿಸಲು ಸಲಹೆ ನೀಡಿದರು.

ನಮ್ಮ ಸಂಘದ ಕಾರ್ಯಕ್ರಮಗಳ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸಿದ ವಿಶ್ವಸ್ಥಾನಿಕ ಮಹಾಮಂಡಲದ ಅಧ್ಯಕ್ಷ ಶ್ರೀ ಮಂಜುನಾಥ್ ಹೆಬ್ಬಾರ್ ಯುವಜನತೆಯು ಒಟ್ಟಾಗಿ ಸಂಘದ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು ಎಂದು ಕರೆನೀಡಿದರು.

ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ, ಸ್ನಾತಕೋತ್ತರ ಪದವಿ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಎಸ್.ಎಸ್.ಎಲ್.ಸಿ.ಯಲ್ಲಿ ಅತ್ಯುತ್ತಮ ಅಂಕಗಳಿಸಿದ ಕು। ರೂಪಾಲಿ ರಾವ್ ಅವರನ್ನು ಶಾಲು ಹೊದಿಸಿ ಗೌರವಿಸಲಾಯಿತು. ವಿದ್ಯಾರ್ಥಿವೇತನದ ಪಟ್ಟಿಯನ್ನು ಶ್ರೀ ವಾಸುದೇವ ಶಾನುಭೋಗ್ ಇವರು ವಾಚಿಸಿದರು. ಶ್ರೀ ರಾಧಾಕೃಷ್ಣ ಹೆಬ್ಬಾರ್ ಅವರು ಎಲ್ಲರಿಗೂ ಧನ್ಯವಾದ ಸಲ್ಲಿಸಿದರು. ನಂತರ ಯುವವೇದಿಕೆ ಸದಸ್ಯರಿಂದ 'ವೀರಭಾರ್ಗವ' ಎಂಬ ಯಕ್ಷಗಾನ ಬಯಲಾಟವು ಸಂಘದ ಸದಸ್ಯರು ಮತ್ತು ಭಾಗವತರು ಆಗಿರುವ, ಶ್ರೀ ಶಶಿ ರಾವ್, ಚಿತ್ರಾಪು ಅವರ ಮಾರ್ಗದರ್ಶನದಲ್ಲಿ ಪ್ರದರ್ಶಿಸಲಾಯಿತು. ಮಹಿಳಾ ವೇದಿಕೆ ಸದಸ್ಯರು ಹಾಗೂ ಮಕ್ಕಳಿಂದ ವಿವಿಧ ನೃತ್ಯಗಳು ಪ್ರದರ್ಶಿಸಲಾಯಿತು. ಶ್ರೀ ಪ್ರವೀಣ್ ಕುಮಾರ್ ಮಲ್ಲಮಾರು ಹಾಗೂ ಬಳಗದವರು ರುಚಿಕರವಾದ ಭೋಜನ ವ್ಯವಸ್ಥೆಯನ್ನು ಏರ್ಪಡಿಸಿದ್ದರು.


**ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)**

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : 9880968032 / 0824-2982095

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ ✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು ✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು ✆ : 9945916755
ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು ✆ : 8904801404
ಮುಲ್ಕಿ : ಮಾತಾ ರೆಸಿಡೆನ್ಸಿ, ಹಳೆಯಂಗಡಿ, ಮುಲ್ಕಿ ✆ : 9980638274

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ 9.5%
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು

ನಿಮ್ಮ ಹೂಡಿಕೆಗಳು ಕೇವಲ 88 ತಿಂಗಳಲ್ಲಿ **ದ್ವಿಗುಣವಾಗುವುದು**

**ಲಕ್ಷಾಧೀಶ ಯೋಜನೆ**
ರೂ. 1,00,000/-
ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ

**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ 6,800/-ರ ತನಕ



ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

## ವಿವಿಧ ನಿಧಿಗಳ ಸ್ಥಾಪನೆ ಮತ್ತು ಉನ್ನತೀಕರಣ



### ಪಾವಂಜೆ ಜ್ಞಾನಶಕ್ತಿ ದೇವಸ್ಥಾನ ನಿಧಿಯ ಮೊತ್ತ ಏರಿಕೆ

ಮಂಗಳೂರು ನಿವಾಸಿ ಖ್ಯಾತ ಇಂಜಿನಿಯರ್ ಶ್ರೀ ಫಲಿಮಾರು ಮುರಳೀಧರ್ ರಾವ್ ಮತ್ತು ಶ್ರೀಮತಿ ಮಂಜುಳಾ ಮುರಳೀಧರ್ ರಾವ್ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಶ್ರೀ ಫಲಿಮಾರು ವೆಂಕಟ್ ರಾವ್ ಮತ್ತು ಶ್ರೀಮತಿ ಗಂಗಮ್ಮ ಮೆಮೋರಿಯಲ್ ಪಾವಂಜೆ ಜ್ಞಾನಶಕ್ತಿ ದೇವಸ್ಥಾನ ಫಂಡ್'ಗೆ ರೂ. 20,000/– ನೀಡಿರುವರು.

ಈ ಹಿಂದೆ ಅನ್ನದಾನ ಮತ್ತು ವೈದಿಕ ಶಿಕ್ಷಣ ನಿಧಿಗೆ ರೂ. 3,30,000/– ನೀಡಿದ್ದು, ಈಗ ಒಟ್ಟು ಮೊತ್ತ ರೂ. 3,50,000/–ಕ್ಕೆ ಹೆಚ್ಚಿಸಿದ್ದಾರೆ.

ಈ ದಂಪತಿಗಳಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು

### ಸಾಲ ವಿದ್ಯಾರ್ಥಿವೇತನ ನಿಧಿ ಹೆಚ್ಚಳ

ಮಂಗಳೂರು ನಿವಾಸಿ ಖ್ಯಾತ ಇಂಜಿನಿಯರ್ ಶ್ರೀ ಫಲಿಮಾರು ಮುರಳೀಧರ ರಾವ್ ಮತ್ತು ಶ್ರೀಮತಿ ಮಂಜುಳ ಮುರಳೀಧರ ರಾವ್ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿದ್ದ 'ಶ್ರೀ ಫಲಿಮಾರು ವೆಂಕಟ್ ರಾವ್ ಮತ್ತು ಶ್ರೀಮತಿ ಗಂಗಮ್ಮ ಮೆಮೋರಿಯಲ್ MLS ಫಂಡ್'ಗೆ ರೂ. 50,000/– ನೀಡಿರುವರು.

ಈ ಹಿಂದೆ ರೂ. 2,00,000/– ನೀಡಿದ್ದು ಈಗ ಒಟ್ಟು ಮೊತ್ತ 2,50,000/–ಕ್ಕೆ ಹೆಚ್ಚಿಸಿರುವರು. ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು.

### ಅನ್ನದಾನ ನಿಧಿ ಸ್ಥಾಪನೆ

ಮಂಗಳೂರು ನಿವಾಸಿ ಖ್ಯಾತ ಇಂಜಿನಿಯರ್ ಫಲಿಮಾರು ಶ್ರೀ ಮುರಳೀಧರ ರಾವ್ ಮತ್ತು ಶ್ರೀಮತಿ ಮಂಜುಳ ಮುರಳೀಧರ ರಾವ್ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ, ಕೊಕ್ರಾಡಿ ಶಾಲಿಪುರ 'ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಅನ್ನದಾನ ಫಂಡ್', ರೂ. 20,000/– ನೀಡಿ ಹೊಸ ನಿಧಿಯನ್ನು ಸ್ಥಾಪಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಕೃತಜ್ಞತೆಗಳು.

### ಕಂಪ್ಯೂಟರ್ ನಿಧಿಗೆ ಸಹಾಯಹಸ್ತ

ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಅವರು ಕಂಪ್ಯೂಟರ್ ಕಲಿಯುವ ಮಕ್ಕಳಿಗೆ ಸಹಾಯ ಮಾಡಲು ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಮೂಲನಿಧಿಯಾಗಿ ರೂ. 1,10,000/– ದೇಣಿಗೆ ನೀಡಿ 'ಕಂಪ್ಯೂಟರ್ ಶಿಕ್ಷಣ ವಿದ್ಯಾನಿಧಿ'ಯನ್ನು ಸ್ಥಾಪಿಸಿದ್ದಾರೆ. ಈ ನಿಧಿಯ ಮೊತ್ತವನ್ನು ಆಸಕ್ತ ಸಮಾಜ ಬಾಂಧವರ ದೇಣಿಗೆಯಿಂದ ಕನಿಷ್ಠ ರೂ. 10 ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವಿದ್ದು ಇಂತಹ ಸಮಾಜಮುಖೀ ಕಾರ್ಯಕ್ಕೆ ಮಂಗಳೂರು ನಿವಾಸಿ ಖ್ಯಾತ ಇಂಜಿನಿಯರ್ ಫಲಿಮಾರು ಶ್ರೀ ಮುರಳೀಧರ ರಾವ್ ಮತ್ತು ಶ್ರೀಮತಿ ಮಂಜುಳ ರಾವ್ ದಂಪತಿಗಳು ಶ್ರೀ ಸದನದ ದೀಪಾವಳಿ ಆಚರಣೆ ಕಾರ್ಯಕ್ರಮದ ಸಂದರ್ಭದಲ್ಲಿ ರೂ. 10,000/– ನೀಡಿರುವರು. ಇದುವರೆಗೆ ದಾನಿಗಳಿಂದ ಒಟ್ಟು ಮೊತ್ತ ರೂ. 2,70,000/– ಸಂಗ್ರಹವಾಗಿದೆ. ಬಾಕಿ ಉಳಿದ ಮೊತ್ತ ರೂ. 7,30,000/– (ರೂಪ್ಯಾ ಏಳು ಲಕ್ಷದ ಮೂವತ್ತು ಸಾವಿರ) ಶ್ರೀ ಸುಬ್ರಹ್ಮಣ್ಯ ಸದನದ ಪರವಾಗಿ ದಾನಿಗಳೆಲ್ಲರಿಗೂ ಅನಂತಾನಂತ ಧನ್ಯವಾದಗಳು.

## ಪುತ್ತೂರಿನ 'ಶಿವಸದನ'ಕ್ಕೆ ದೇಣಿಗೆ



ಮಂಗಳೂರು ಕೂಳೂರು ನಿವಾಸಿ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳು, ಶ್ರೀಮತಿ ಪುಷ್ಪಾವತಿ ಅವರ 70ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 25,000/– ದೇಣಿಗೆ ನೀಡಿದ್ದು, ಇವರು ಈ ಹಿಂದೆ ರೂ. 2,50,000/– ನೀಡಿದ್ದು, ಈಗ ಒಟ್ಟು ಮೊತ್ತ ರೂ. 2,75,000/– ನೀಡಿದಂತಾಗಿದೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಸಾಮಾನ್ಯ ವಿದ್ಯಾರ್ಥಿ ವೇತನ ನಿಧಿಗೆ ಕೊಡುಗೆ



ಮಂಗಳೂರಿನ ಕೂಳೂರು ನಿವಾಸಿ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳು ಸುಬ್ರಹ್ಮಣ್ಯ ಸಭಾದ ಸಾಮಾನ್ಯ ವಿದ್ಯಾರ್ಥಿವೇತನ ನಿಧಿಗೆ 70ನೆಯ ಹುಟ್ಟುಹಬ್ಬದ ಸವಿನೆನಪಿಗಾಗಿ ರೂ. 10,000/–ವನ್ನು ದೇಣಿಗೆ ನೀಡಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಕೃತಜ್ಞತೆಗಳು.


**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**


ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013



**PRAMOD AUTOMOBILES**

30 Years of Service

KARANGALPADY
MANGALORE- 575 003

Ph. : 2493633 (O)
2212723 (R)
M. : 9448260225

Wholesale & Retail Dealers in
2 & 3 WHEELERS SPARES & ACCESSORIES

Prop. : Ln. K. HARSHA KUMAR


Prop: Somashekhar
Mob: 9844551244

**WONDER CREATION**
Decor & Event planners

Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography

2T-145-3A, Kulai Gudde Road, Kulai, Surathkal

## ವಿದ್ಯಾರ್ಥಿವೇತನ ನಿಧಿಗೆ ಕೊಡುಗೆ



ಮಂಗಳೂರಿನ ಉಜ್ಜೋಡಿ ಶ್ರೀ ಭುಜಂಗ ರಾವ್ ಮತ್ತು ಶ್ರೀಮತಿ ಸುನಿಲಾ ರಾವ್ ಇವರ ಮಗಳು ಶ್ರೀಮತಿ ಸ್ವಪ್ನಗಂಧ ಮತ್ತು ಶ್ರೀ ಗಿರೀಶ್ ದಂಪತಿಗಳು ದಾನಿಗಳಿಂದ ನೇರ ವಿದ್ಯಾರ್ಥಿ ಗಳಿಗೆ ಸ್ಕಾಲರ್‌ಶಿಪ್ ನೀಡುವ ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿವೇತನ ನಿಧಿಗೆ ರೂ. 30,000/– ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಕೃತಜ್ಞತೆಗಳು.

---

ಆಸ್ಟ್ರೇಲಿಯಾ ನಿವಾಸಿ ಶ್ರೀ ಮುಕುಂದ ಮತ್ತು ಶ್ರೀಮತಿ ಶುಭ ಗೌರಿ ಮುಕುಂದ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 25,001/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹೃದಯಪೂರ್ವಕ ವಂದನೆಗಳು.

---

## ಸಾಲ ವಿದ್ಯಾರ್ಥಿವೇತನ ನಿಧಿ ಹೆಚ್ಚಳ

ಬೆಂಗಳೂರು ನಿವಾಸಿ ಶ್ರೀ ಪದ್ಮನಾಭ ರಾವ್ ಮತ್ತು ಶ್ರೀಮತಿ ಪದ್ಮಲತಾ ರಾವ್ ಅವರು 'ಶ್ರೀಮತಿ ಗುಲಾಬಿ ಮತ್ತು ಶ್ರೀ ಎನ್. ರಾಮರಾವ್ MLS ಫಂಡ್'ಗೆ ರೂ. 50,000/– ನೀಡಿ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿದ್ದು, ಈ ವರ್ಷ ಅದಕ್ಕೆ ರೂ. 55,000/–ನ್ನು ಸೇರಿ ಒಟ್ಟು ಮೊತ್ತ ರೂ. 1,05,000/–ಕ್ಕೆ ವೃದ್ಧಿಸಿದ್ದಾರೆ. ಅವರಿಗೆ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು.

---



ಮಂಗಳೂರು ನಿವಾಸಿ ಶ್ರೀ ರಾಜೇಂದ್ರ ರಾವ್ ಮತ್ತು ಶ್ರೀಮತಿ ರತ್ನ ರಾಜೇಂದ್ರ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 5,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾರ್ಥಿವೇತನ ನಿಧಿ ಸ್ಥಾಪನೆ



ಮಂಗಳೂರಿನ ಕುಲಶೇಖರ ನಿವಾಸಿ ಶ್ರೀಮತಿ ವಿದ್ಯಾವತಿ ರಾವ್ ಮತ್ತು ಶ್ರೀ ಎಂ. ಸುರೇಶ ರಾವ್ (ಇವರು ಸುಬ್ರಹ್ಮಣ್ಯ ಸಭಾ ನಿರ್ದೇಶಕರು) ತಮ್ಮ 70ನೇ ವರ್ಷದ ಭೀಮರಥ ಶಾಂತಿಯ ಸಮಾರಂಭದಲ್ಲಿ ತಮ್ಮ ಹೆತ್ತವರಾದ ಶ್ರೀ ಮಡಿಯಾಲ ಶ್ರೀನಿವಾಸಯ್ಯ ಮತ್ತು ಕೃಷ್ಣಮ್ಮ ಅವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ರೂ. 30,100/– ನೀಡುವ ಮೂಲಕ ವಿದ್ಯಾರ್ಥಿವೇತನ ನಿಧಿಯನ್ನು ಸ್ಥಾಪಿಸಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅವರಿಗೆ ಅನಂತಾನಂತ ಧನ್ಯವಾದಗಳು.

## ಸಾಲ ವಿದ್ಯಾರ್ಥಿವೇತನ ನಿಧಿಯ ಮೊತ್ತ ಏರಿಕೆ



ಮಂಗಳೂರು ನಿವಾಸಿ ಶ್ರೀಮತಿ ಸ್ನೇಹಲತಾ ರಾವ್ ಮತ್ತು ಸಾಂತೂರು ಡಾ. ದಿವಾಕರ ರಾವ್ ತಮ್ಮ ಹೆತ್ತವರಾದ ಸಾಂತೂರು ಜನಾರ್ಧನ ರಾವ್ ಮತ್ತು ಶ್ರೀಮತಿ ಜಲಜ ಅವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿರುವ ವಿದ್ಯಾನಿಧಿಗೆ ರೂ. 30,000/– (ಮೂವತ್ತು ಸಾವಿರ) ನೀಡಿ ನಿಧಿಯನ್ನು ಹೆಚ್ಚಿಸಿದ್ದಾರೆ.

ಈ ಮೊದಲು ರೂ. 3,70,000/– ಇದ್ದ ನಿಧಿಯನ್ನು ಈಗ ರೂ. 4,00,000/– ಹೆಚ್ಚಿಸಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಸಹೃದಯದಿಂದ ಬಂದ ಕೃತಜ್ಞತೆ – ಪ್ರೇರಣೆಯ ನಿಜವಾದ ಅರ್ಥ

ಮೂಡಿಗೆರೆಯ ಕುಮಾರಿ ಅನನ್ಯ ಇವಳ ಬಿ.ಕಾಂ. ಶಿಕ್ಷಣವನ್ನು ಶ್ರೀ ಸುಬ್ರಹ್ಮಣ್ಯ ಸಭಾ ಅಧ್ಯಕ್ಷರಾದ ಡಾ। ಎ.ಪಿ. ಕೃಷ್ಣ ಇವರ ಮಗಳು ಶ್ರೀಮತಿ ಅಂಕಿತಾ ಪ್ರಾಯೋಜಿಸಿದ್ದಾರೆ. ಕು। ಅನನ್ಯ ತನಗೆ ಕೆಲಸ ಸಿಕ್ಕ ಮೊದಲ ಸಂಬಳ ರೂಪಾಯ 10,000/–ನ್ನು ಶ್ರೀ ಸುಬ್ರಹ್ಮಣ್ಯ ಸಭಾದ ಸಾಮಾನ್ಯ ವಿದ್ಯಾರ್ಥಿವೇತನ ನಿಧಿಗೆ ನೀಡಿ ಅತ್ಯುತ್ತಮ ಕೆಲಸ ಮಾಡಿ ಎಲ್ಲರಿಗೂ ಮಾದರಿ ಆಗಿದ್ದಾಳೆ.

*ಇದು ಕೇವಲ ಸಹಾಯವಲ್ಲ – ಕೃತಜ್ಞತೆಯ ಪ್ರತೀಕ, ಸಹೃದಯದಿಂದ ಬಂದ ಒಳ್ಳೆಯತನದ ಸಂಕೇತ.* ತಾನು ಪಡೆದ ಪ್ರೇರಣೆಯನ್ನು ಇನ್ನೊಬ್ಬರ ಜೀವನ ಬೆಳಕಾಗಿಸಲು ಮಾಡಿದ ಕು। ಅನನ್ಯಳ ನಡೆ ಇನ್ನೊಬ್ಬರಿಗೆ ಪ್ರೇರಣೆಯಾಗಲಿ. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಕೃತಜ್ಞತೆಗಳು.

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

PREETHIKA AUTOMOBILES
2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

*Manish Rao U.*
Tel : (O) 2223301
Mobile : 9448726499 / 8884284939
NAVA COMPUTERS

Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

# ಶ್ರೀ ಶಾರದಾಂಬಾ ಭಜನಾ ಮಂಡಳಿ ಕಾರ್ಯಕ್ರಮ



ಶ್ರೀ ಶಾರದಾಂಬಾ ಭಜನಾ ಮಂಡಳಿ ಶ್ರೀ ಸುಬ್ರಹ್ಮಣ್ಯ ಸದನ, ಮಂಗಳೂರು ಇಲ್ಲಿನ ಸದಸ್ಯರು ವಿಶಿಷ್ಟ ರೂಪದಲ್ಲಿ 'ಗುರುಭಕ್ತಿನಮನ' ಭಕ್ತಿ ಭಜನಾ ಅಂಜಲಿ ಎಂಬ ವಿನೂತನ ಕಾರ್ಯಕ್ರಮವನ್ನು ಭಜನಾ ಗುರುಗಳಾದ ಶ್ರೀ ಪೊಳಲಿ ಸುಬ್ಬರಾವ್ ಅವರ ನೇತೃತ್ವದಲ್ಲಿ ಶ್ರೀ ಸುಬ್ರಹ್ಮಣ್ಯ ಸದನದಲ್ಲಿ ವಿಜೃಂಭಣೆಯಿಂದ ಜರಗಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ನಟ್ಟೋಜಿ ಶ್ಯಾರ ಕುಟುಂಬಕ್ಕೆ (ನಡುಶ್ಯಾರ ಮನೆ) ಸೇರಿದ ಪುತ್ತೂರು ಕೊಡಿಪ್ಪಾಡಿ ನಿವಾಸಿ **ಶ್ರೀಮತಿ ಸರಸ್ವತಿ ಜೆ. ರಾವ್** (75) (ದಿ। ಎನ್. ಎಸ್. ಜಗದೀಶ ರಾಯರ ಧರ್ಮಪತ್ನಿ) ಅವರು ತಾ. 10-11-2025ನೇ ಸೋಮವಾರ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — —




**ಶ್ರೀಮತಿ ತೆಂಕಿಲ ಸುಶೀಲ ಶಿವರಾವ್** ಅವರು ತಾ. 2-11-2025ನೇ ರವಿವಾರ ನಿಧನರಾದರು. ಇವರು ಪುತ್ತೂರಿನ ದಿ। ತೆಂಕಿಲ ಶಿವರಾವ್ ಅವರ ಪತ್ನಿ. ಮಂಗಳೂರಿನ ಕೆನರಾ ಹೆಣ್ಣುಮಕ್ಕಳ ಪ್ರೌಢಶಾಲೆಯಲ್ಲಿ 38 ವರ್ಷಗಳ ಕಾಲ ಹಿಂದಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — —



ಕಡಬ ದಿ। ಪುಣಚ ರಾಮಕೃಷ್ಣ ರಾವ್ ಅವರ ಪತ್ನಿ **ಶ್ರೀಮತಿ ವಿಶಾಲಾಕ್ಷಿ** (85) ಇವರು ತಾ. 2-11-2025ನೇ ರವಿವಾರ ನಿಧನರಾದರು. ಅವರು 6 ಮಂದಿ ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರನ್ನು ಅಗಲಿದ್ದಾರೆ.

— — — — —



**ಡಾ। ಚಾಮರಾಜ ಎ. ರಾವ್** ತಾ. 10-11-2025ನೇ ಸೋಮವಾರ ಅಮೇರಿಕಾದ ಲಾಸ್ ವೇಗಸ್‌ನಲ್ಲಿ ನಿಧನರಾದರು. ಅವರು 25 ವರ್ಷ ಅಮೇರಿಕಾ ಏರ್‌ಫೋರ್ಸ್‌ನಲ್ಲಿ ಮನೋತಜ್ಞರಾಗಿ ಸೇವೆ ಸಲ್ಲಿಸಿದ್ದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — —



**ತೆಂಕುಬೈಲು ಶ್ರೀ ಮಂಜುನಾಥಯ್ಯ** (87) ತಾ. 6-11-2025ನೇ ಗುರುವಾರ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — —



**ವೈ. ನಾಗೇಶ್ ರಾವ್** (58) ತಾ. 13-10-2025ನೇ ಸೋಮವಾರ ಸತಾರ್‌ನಲ್ಲಿ ನಿಧನರಾದರು. ಅವರು ತಾಯಿ, ಪತ್ನಿ, ಓರ್ವ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.



ಪಡುಬಿದ್ರಿ ರಾಮನಗರ ನಿವಾಸಿ **ಪಿ. ವಾಸುದೇವ ರಾವ್** (90) ಇವರು ತಾ. 28-10-2025ನೇ ಮಂಗಳವಾರ ಪಡುಬಿದ್ರಿಯಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

— — — — —



**ಬಡಂಜೆ ಮಂಜುಳಾ** (73) ತಾ. 13-11-2025ನೇ ಗುರುವಾರ ಮುಂಬಯಿಯಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — —



ತೆಂಕಿಲ ಕುಟುಂಬಕ್ಕೆ (ಮಳವಳ್ಳಿ ಕವಲು) ಸೇರಿದ ಬೆಂಗಳೂರು ನಿವಾಸಿ **ಮಳವಳ್ಳಿ ರಾಜಾರಾಮ ರಾವ್** (75) ಅವರು ತಾ. 13-10-2025ನೇ ಸೋಮವಾರ ದೈವಾಧೀನರಾಗಿದ್ದಾರೆ. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — —



**ಶ್ರೀಮತಿ ಉಮಾ** (77) ತಾ. 11-11-2025ನೇ ಮಂಗಳವಾರ ಬೆಂಗಳೂರು ಇಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

— — — — —



**ಮೋರಾಜೆ ಸೀತಾರಾಮ ರಾವ್** (99) ತಾ. 3-11-2025ನೇ ಸೋಮವಾರ ಪೆರುವಾಜೆಯಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

— — — — —



ಶ್ರೀ ಆರೂರು ಪ್ರಭಾಕರ್ ರಾವ್ ಇವರ ಧರ್ಮಪತ್ನಿ **ಶ್ರೀಮತಿ ವಿಮಲಾ** (76) ತಾ. 20-10-2025ನೇ ಸೋಮವಾರ ನಾಸಿಕ್‌ನಲ್ಲಿ ನಿಧನರಾದರು. ಅವರು ಪತಿ, ಇಬ್ಬರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ.

— — — — —



**ಕಿಗ್ಗ ವಿಜಯಲಕ್ಷ್ಮೀ** (58) ತಾ. 12-10-2025ನೇ ರವಿವಾರ ನಿಧನರಾದರು. ಅವರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ .

ಪತ್ರಿಕೆಗೆ ಶುಭ ಬಯಸುವ-



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***

ಪತ್ರಿಕೆಗೆ ಶುಭ ಬಯಸುವ-




**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

ಪತ್ರಿಕೆಗೆ ಶುಭ ಬಯಸುವ-



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ದೀಪಾವಳಿ ಸಂಭ್ರಮ'




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಆಚರಣೆಯನ್ನು ತಾ. 25–10–2025ನೇ ಶನಿವಾರದಂದು ಸಂಜೆ ಗಂಟೆ 5:30ರಿಂದ ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.

ಶ್ರೀ ಸಭಾದ ಅಧ್ಯಕ್ಷ ಡಾ. ಎ. ಪಿ. ಕೃಷ್ಣ ಮತ್ತು ಪದಾಧಿಕಾರಿಗಳು ಉಪಸ್ಥಿತ ಗಣ್ಯರ ಜತೆಗೂಡಿ ದೀಪ ಪ್ರಜ್ವಲನೆಗೊಳಿಸಿ ಕಾರ್ಯಕ್ರಮ ಆರಂಭಿಸಿದರು. ಶ್ರೀಮತಿ ಆಶಾ ರವೀಂದ್ರ, ಶ್ರೀಮತಿ ಮಮತ ಮತ್ತು ಶ್ರೀಮತಿ ಜ್ಯೋತಿ ದೀಪಸ್ತುತಿ ಗೀತೆ ಹಾಡಿದರು. ಶ್ರೀಮತಿ ರತ್ನ ರಾಜೇಂದ್ರ ದೀಪಾವಳಿಯ ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು.

ಮಹಿಳಾ ವೇದಿಕೆಯ ಉಪಾಧ್ಯಕ್ಷೆ ಶ್ರೀಮತಿ ಪುಷ್ಪ ಶ್ರೀನಿವಾಸ್ ಅವರು ಶ್ರೀಮತಿ ರತ್ನ ರಾಜೇಂದ್ರ ಅವರನ್ನು ಸಭೆಗೆ ಪರಿಚಯಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸ್ವಾಗತನೃತ್ಯವನ್ನು ಕು। ಶ್ರೇಷ್ಠ, ಕು। ಅನ್ವಿತ ಮತ್ತು ಕು। ಅನನ್ಯ ಪ್ರದರ್ಶಿಸಿದರು. ಹಲವು ವಿನೋದಾತ್ಮಕ ಆಟಗಳನ್ನು ಶ್ರೀಮತಿ ಅರುಣಾ ಸೋಮಶೇಖರ್ ಅವರು ನಡೆಸಿಕೊಟ್ಟರು. ಸಾಂಪ್ರದಾಯಿಕ ಉಡುಗೆ ತೊಡುಗೆಗಳ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆಯಿತು. ತೀರ್ಪುಗಾರರಾಗಿ ಶ್ರೀಮತಿ ವೈಜಯಂತಿಮಾಲಾಬೆಳ್ಳೆ ಮತ್ತು ಶ್ರೀಮತಿ ಸುಮನ್ ಸುನಿಲ್ ರಾವ್ ಸಹಕರಿಸಿದರು.

ಬಳಿಕ ಬಾಲಪ್ರತಿಭೆಗಳಾದ ಕು। ಅಂಕಿತಶ್ರೀ, ಕು। ಮಧುರಿಮಾ ಮತ್ತು ಕು। ಮನಸ್ವಿನಿ ಅವರ ನೃತ್ಯ, ಶ್ರೀಮತಿ ಅನುರಾಧ ಕಿಶೋರ್ ನಿರ್ದೇಶನದ ಮಹಿಳಾ ವೇದಿಕೆಯ ಸದಸ್ಯೆಯರ ದೀಪ ನೃತ್ಯ, ಗರ್ಭಾ ಮತ್ತು ದಾಂಡಿಯ ಸಮೂಹನೃತ್ಯ, ಪುರುಷರ ಸಮೂಹ ನೃತ್ಯಗಳು ನಡೆಯಿತು. ನೃತ್ಯ ಸಂಯೋಜನೆ ಮಾಡಿದ ಶ್ರೀಮತಿ ಅನುರಾಧ ಕಿಶೋರ್ ಮತ್ತು ಕಲಾತ್ಮಕ ರಂಗೋಲಿ ರಚಿಸಿದ CA ನಾಗರಾಜ್ ಶರ್ಮ ಅವರನ್ನು ಗೌರವಿಸಲಾಯಿತು. ಶ್ರೀಮತಿ ಪ್ರಭಾ ಪಿ. ರಾವ್ ಅವರು ಬಹುಮಾನಗಳನ್ನು ವಿತರಿಸಿದರು ಮತ್ತು ಶ್ರೀ ಸಭಾ ಜೊತೆ ಕಾರ್ಯದರ್ಶಿ ಶ್ರೀ ಸಂತೋಷ್ ಕುಮಾರ್ ಅವರು ಐಸ್‌ಕ್ರೀಮ್‌ನ್ನು ಪ್ರಾಯೋಜಿಸಿದರು.

ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಉದಯಕುಮಾರ್ ಪಿ., ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಜಯಂತಿ ವಿನೋದ್ ರಾವ್, ಕಾರ್ಯದರ್ಶಿ ಶ್ರೀಮತಿ ಶಕುಂತಲಾ ವಿಜಯಕುಮಾರ್, ಜೊತೆ ಕಾರ್ಯದರ್ಶಿ ಶ್ರೀಮತಿ ಶುಭಲಕ್ಷ್ಮಿ ರವಿ ಕುಮಾರ್, ಉಪಾಧ್ಯಕ್ಷೆ ಶ್ರೀಮತಿ ವೀಣಾ ಬೆಳ್ಳೆ, ಯುವ ವೇದಿಕೆ ಅಧ್ಯಕ್ಷರಾದ ಶ್ರೀ ಜನಕರಾಜ್, ಶ್ರೀ ಸಭಾ ನಿರ್ದೇಶಕರುಗಳು ಮತ್ತು ಸದಸ್ಯರು ಕಾರ್ಯಕ್ರಮದ ವ್ಯವಸ್ಥೆಯಲ್ಲಿ ಸಹಕರಿಸಿದರು.

ಭೋಜನದ ವ್ಯವಸ್ಥೆಯಲ್ಲಿ ಶ್ರೀ ಕರುಣ್ ರಾವ್ ಬೆಳ್ಳೆ ಅವರು ಕೈಜೋಡಿಸಿದರು. ಮಹಿಳಾ ವೇದಿಕೆಯ ಜೊತೆ ಕಾರ್ಯದರ್ಶಿ ಶ್ರೀಮತಿ ಅಕ್ಷತಾ ಮನೀಶ್ ರಾವ್ ಧನ್ಯವಾದ ಸಮರ್ಪಣೆ ಮಾಡಿದರು.

ಶ್ರೀ ರಘುವೀರ್ ಪೆರ್ಡೂರು ಚಿತ್ರಗಳನ್ನು ಮತ್ತು ವೀಡಿಯೊಗಳನ್ನು ಒದಗಿಸಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಹುಮಾನ ವಿತರಣೆ, ಸುಡುಮದ್ದು ಪ್ರದರ್ಶನ ಮತ್ತು ವಿಶೇಷ ಖಾದ್ಯಗಳ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

*ವರದಿ : ಶ್ರೀಮತಿ ಜಯಂತಿ ವಿನೋದ್ ರಾವ್     ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರು*

## ಸಂಗೀತದಲ್ಲಿ ಪಾರಮ್ಯವನ್ನು ಮೆರೆದ ಬಹುಮುಖ ಪ್ರತಿಭೆ ಶ್ರೀಮತಿ ಸಂಧ್ಯಾ ರಾವ್ ಬಿ. ಎಚ್.



ಶ್ರೀಮತಿ ಸಂಧ್ಯಾ ರಾವ್ ಬಿ. ಎಚ್. ಅವರು ಮಂಗಳೂರಿನಲ್ಲಿ ತಮ್ಮ ಶಾಸ್ತ್ರೀಯ ಸಂಗೀತಾಭ್ಯಾಸವನ್ನು ಪ್ರಾರಂಭಿಸಿ, ವಿದ್ವಾನ್ ಎಂ. ನಾರಾಯಣ ಅವರ ಮಾರ್ಗದರ್ಶನದಲ್ಲಿ ಸಂಗೀತ ಸೀನಿಯರ್ ಪದವಿಯನ್ನು ಪೂರ್ತಿಗೊಳಿಸಿದ್ದಾರೆ. ಕಳೆದ 8 ವರ್ಷಗಳಿಂದ ಅವರು ಬೆಂಗಳೂರಿನಲ್ಲಿ ವಿದುಷಿ ಶ್ರೀಮತಿ ಸರಸ್ವತಿ ಕುಮಾರ್ ಅವರ ಶಿಷ್ಯೆಯಾಗಿದ್ದು, 2021ರಲ್ಲಿ ಪ್ರೀ–ವಿದ್ವತ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಅವರು ಕಳೆದ 15 ವರ್ಷಗಳಿಂದ ಆಸಕ್ತ ವಿದ್ಯಾರ್ಥಿಗಳಿಗೆ ಸಂಗೀತದ ತರಗತಿಗಳನ್ನು ನಡೆಸುತ್ತಾ, ಶಾಸ್ತ್ರೀಯ ಸಂಗೀತದ ಪ್ರಚಾರಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇದಲ್ಲದೆ, ಅವರು ನೃತ್ಯದಲ್ಲಿ ಸೀನಿಯರ್ ಪದವಿಯನ್ನು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದಿಂದ ಅಪ್ಲೈಡ್ ಜೆನೆಟಿಕ್ಸ್‌ನಲ್ಲಿ ಎಂ.ಎಸ್ಸಿ. ಪದವಿಯನ್ನು ಪಡೆದಿದ್ದಾರೆ.

## ಶುಭವಿವಾಹ

ನೆಟ್ಟಮುಂಡಾಜೆ ಶ್ರೀಮತಿ ಚೂಡಾಮಣಿ ಮತ್ತು ಶ್ರೀ ಎನ್. ಎಮ್. ವಿಷ್ಣುಕುಮಾರ್ ಇವರ ಪುತ್ರಿ **ಚಿ। ಸೌ। ದಿಶಾ** ಇವರ ವಿವಾಹ ಮಹೋತ್ಸವವು ಶ್ರೀ ಅಶೋಕ ರಾವ್ ಮತ್ತು ಶ್ರೀಮತಿ ಶ್ರೀಮತಿ ರಾವ್ ಕಟಪಾಡಿ ಮೂಡಬೆಟ್ಟು ಇವರ ಪುತ್ರ **ಚಿ। ಅಭಿಷೇಕ್** ಇವರೊಂದಿಗೆ 'ಶ್ರೀ ವಿನಾಯಕ ಶಂಕರನಾರಾಯಣ ದುರ್ಗಾಂಬ ಕ್ಷೇತ್ರದ ನಂದಾದೀಪ ಕಲ್ಯಾಣ ಮಂಟಪ'ದಲ್ಲಿ ದಿನಾಂಕ 07–11–2025ನೇ ಶುಕ್ರವಾರದಂದು ನೆರವೇರಿತು.

❖ ❖ ❖

ಪೂವಂದೂರು ಶ್ರೀ ರಾಮಚಂದ್ರ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ರಾವ್ ಇವರ ಪುತ್ರಿ **ಚಿ। ಸೌ। ರೇಣುಕಾ ರಾವ್** ಮತ್ತು ಶ್ರೀ ಕೆ. ನಾಗರಾಜ ರಾವ್ ಮತ್ತು ಶ್ರೀಮತಿ ಜ್ಯೋತಿ ರಾವ್ ಇವರ ಪುತ್ರ **ಚಿ। ಸುಜನ್ ರಾವ್** ಇವರ ವಿವಾಹ ಮಂಗಳ ಕಾರ್ಯಕ್ರಮವು 'ಮಾಧವ ಮಂಗಳ ಸಭಾಭವನ'ದಲ್ಲಿ ತಾ. 31–10–2025ನೇ ಶುಕ್ರವಾರ ನಡೆಯಿತು.

❖ ❖ ❖

ಶ್ರೀಮತಿ ಸುಮಂಗಲಾ ಮತ್ತು ಶ್ರೀ ಸುಧೀರ್ ರಾವ್ ಕೇದಿಗೆ ಇವರ ಪುತ್ರಿ **ಚಿ। ಸೌ। ಸಂಜನಾ** ಮತ್ತು **ಚಿ। ಅನುಷ್** (ಶ್ರೀಮತಿ ಗೀತಾ ಮತ್ತು ದಿ। ಅಶ್ವಥ್‌ನಾರಾಯಣ ಎ. ಪಿ. ಇವರ ಪುತ್ರ) ಇವರ ವಿವಾಹ ತಾ. 13–11–2025ನೇ ಗುರುವಾರ ಮಂಗಳೂರು ಸಂಘನಿಕೇತನದಲ್ಲಿ ನಡೆಯಿತು.

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**



Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available




For Bookings and Enquiries
Swapna Vallish : 9972465209 / 7892235761

# ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಕರೋಕೆ ಹಾಡುಗಳ ಕಾರ್ಯಕ್ರಮ



ಮಂಗಳೂರಿನ ಕದ್ರಿಯಲ್ಲಿರುವ **'ಅನುಷಾ ಅನುರಾಗ'** ಕರೋಕೆ ಮೆಲೋಡಿ ಹವ್ಯಾಸಿ 19 ಹಾಡುಗಾರರ ತಂಡವು, ತಂಡದ ಮ್ಹಾಲಕಿ ಶ್ರೀಮತಿ ರೂಪಲಕ್ಷ್ಮಿ ಇವರ ನೇತೃತ್ವದಲ್ಲಿ ನವೆಂಬರ್ 14ರ ಮಕ್ಕಳ ದಿನಾಚರಣೆಯಂದು ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯದ ವೇದಿಕೆಯಲ್ಲಿ ಕರೋಕೆ ಹಾಡುಗಳ ಕಾರ್ಯಕ್ರಮವೊಂದನ್ನು ನೀಡಿದರು.



Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.